ಗಮನಿಸಿ ಆದಿಮೂರ್ತಿ ರಮೇಶನ ಕಡೆ ತಿರುಗಿ 'ಇವರು ಯಾರು? ಏನು ಸಮಾಚಾರ?' ಎಂದ.

'ಗಡಿಯಾರವೇ ಸಮಾಚಾರ, ಗಡಿಯಾರದಂಗಡಿಯೇ ಸಮಾಚಾರ' ಎಂದ ಅನೂಹ್ಯ. ತನ್ನನ್ನು ಈ ಜಾಗದಿಂದ ಎತ್ತಂಗಡಿ ಮಾಡಿಸಲು ಇದು ಹೊಸ ಉಪಾಯವಿರಬಹುದು ಎನ್ನುವ ಅನುಮಾನ ಬಂತು ಆದಿಮೂರ್ತಿಗೆ. ತನ್ನ ಸಿದ್ಧಾಂತವನ್ನು ಮತ್ತೆ ಹೇಳೋಣವೆಂದು 'ಇದು ಕಾಲ ಮತ್ತು ಅವಕಾಶದ ಸಂಗಮ ಸ್ಥಾನ. ಕಾಲವನ್ನ ಅವಕಾಶದಿಂದ ಬೇರ್ಪಡಿಸಿದರೆ ಮಾಲೀಕರ ಜೀವನದಲ್ಲಿ ಅನಾಹುತಗಳಾಗಬಹುದು' ಎಂದ.

'ಕಾಲ ಅಂತ ಏನೂ ಇಲ್ಲ! ಇರೋದು ಗಡಿಯಾರ ಮಾತ್ರ. ಹಾಗಿರುವಾಗ ಕಾಲ, ಅವಕಾಶ ಸೇರೋದಿಕ್ಕೆ ಹ್ಯಾಗೆ ಸಾಧ್ಯ?' ಎಂದ ಅನೂಹ್ಯ.

ಅದನ್ನು ಕೇಳಿ ಚಕಿತನಾದ ಆದಿಮೂರ್ತಿ ಪ್ರಶ್ನಿಸಿದ 'ನಮ್ಮ ಅನೇಕ ರೀತಿಯ ಗಡಿಯಾರಗಳು, ಕ್ಯಾಲೆಂಡರ್‌ಗಳು, ಪಂಚಾಂಗಗಳು, ಗಂಟೆ, ದಿನ ಮಾಸ, ಋತು, ವರ್ಷ, ಯುಗ, ಮನ್ವಂತರ ಎಲ್ಲಾ ಏನು ಹಾಗಾದರೆ?'

'ನಾನು ಹೇಳ್ತಾ ಇದ್ದೀನಲ್ಲ, ನಮ್ಮ ಹತ್ತಿರ ಅಳೆಯೋ ಉಪಕರಣಗಳಿವೆ, ಆದರೆ ಅಳೆಯಬೇಕಾದ ವಸ್ತು ಇಲ್ಲ. ಇಲ್ಲಿ ಒಂದು ವಿಚಿತ್ರವಿದೆ. ಅದು, ಅಳೆಯುವ ಉಪಕರಣದಿಂದಲೇ ವಸ್ತುವಿನ ಇರುವಿಕೆ ತಿಳಿಯೋದು! ಅಂದರೆ ಗಡಿಯಾರ, ಪಂಚಾಂಗ ಎಲ್ಲಾ ಇದ್ದರೇನೆ ಕಾಲದ ಅಸ್ತಿತ್ವ. ಅದಕ್ಕೆ ಮೂಲ ಮನುಷ್ಯನ ನೆನಪು! ಮತ್ತೆ ಅದನ್ನ ಉಳಿಸಿಕೊಳ್ಳೋ ಹಂಬಲ! ಅದೇ ಕಾಲ.'

'ನೀವು ಹೇಳೋದೆಲ್ಲಾ ಸರಿ. ಆದರೆ ಮಾಲೀಕರ ಆಯಸ್ಸಿಗೂ ಇಲ್ಲಿರುವ ಗಡಿಯಾರಕ್ಕೂ ಸಂಬಂಧ ಇದೆ ಅನ್ನೋದು ನನ್ನ ಬಲವಾದ ನಂಬಿಕೆ. ಅದಕ್ಕೇ ಗಡಿಯಾರ ಸ್ಥಳಾಂತರವಾದರೆ ಅಪಾಯ ಅಂತ ನಾನು ಹೇಳ್ತಾ ಇರೋದು.'

ಅನೂಹ್ಯ ಎರಡು ಹೆಜ್ಜೆ ನಡೆದು ಆದಿಮೂರ್ತಿಗೆ ಅತೀ ಸನಿಹಕ್ಕೆ ಬಂದು ಗುಟ್ಟು ಹೇಳುವವನಂತೆ 'ನಿಮ್ಮ ನಂಬಿಕೆ ಪೂರ್ತಿ ತಪ್ಪು ಅಂತ ಹೇಳಕ್ಕಾಗಲ್ಲ. ಯೋಗದ ಪ್ರಕಾರ ನಮ್ಮ ದೇಹದಲ್ಲಿ ಆರು ಚಕ್ರಗಳಿವೆ. ಆ ಆರು ಚಕ್ರಗಳು ವ್ಯಕ್ತಿಯನ್ನು ವಿಶ್ವದ ಜೊತೆ ಒಂದು ಗೂಡಿಸುವ ಸಾಧನ. ಈಗ ಇಲ್ಲಿರುವ ಗಡಿಯಾರದ ಹಲ್ಲಿನ ಚಕ್ರಗಳಿಗೂ, ರಮೇಶನ ದೇಹದ ಕುಂಡಲಿನೀ ಚಕ್ರಗಳಿಗೂ ಲಹರಿ ಬಂಧ ಸ್ಥಾಪಿತವಾಗಿದ್ದರೆ, ನೀವು ಹೇಳೋ ಹಾಗೆ ಏನಾದರೂ ಆಗ ಬಹುದು' ಎಂದ.

ಆದನ್ನು ಕೇಳಿ ರಮೇಶ ಗಾಬರಿಯಾಗಿ 'ಇವರು ಹೇಳೋ ಹಾಗೆ ಆಗಬಹುದು ಅನ್ನೀಯಾ?' ಎಂದು ಪ್ರಶ್ನಿಸಿದ.

'ಆಗಬಾರದು ಅಂತೇನಿಲ್ಲ. ಹಾಗೇನಾದರೂ ಆದರೆ ಅದಕ್ಕೆ ಒಂದು ಪರಿಹಾರವಿದೆ. ಅದೇ ಚಕ್ರ ಬೀಜಮಂತ್ರ ಪ್ರಯೋಗ. ಅದರಿಂದ ಲಹರಿ ಬಂಧವನ್ನ ಬಿಡಿಸಬಹುದು' ಎಂದು ವಿಶ್ವಾಸದಿಂದ ನುಡಿದ ಅನೂಹ್ಯ.

ಆದಿಮೂರ್ತಿ ಚಕಿತನಾಗಿದ್ದ. ತಳವಿಲ್ಲದ ಬಾವಿಯೊಳಗೆ ಕುಸಿಯುತ್ತಿರುವ ಅನುಭವವಾಗಿತ್ತು ಅವನಿಗೆ. ರಮೇಶನ ಅಪ್ಪ ತೀರಿಕೊಂಡಾಗ ತನ್ನ ಮನಸ್ಸಿನಲ್ಲಿ ಮೂಡಿದ್ದ 'ಕಾಲಾವಕಾಶ'ದ ಸಿದ್ಧಾಂತ ಹೀಗೆ ಬುಡಮೇಲಾಗುವುದೆಂದು ಅವನು ಊಹಿಸಿರಲಿಲ್ಲ. ಅಲ್ಲದೇ ಆ ಚಕ್ರ, ಈ ಚಕ್ರ, ಲಹರಿ ಬಂಧ ಎನ್ನುವ ನಿಗೂಢವಾದ ಮಾಯಕದ ವಿಷಯ ಬೇರೆ ಅವನನ್ನು ತಬ್ಬಿಬ್ಬು ಮಾಡಿತ್ತು. ಇನ್ನು ತನ್ನ ಗೌರವ ಉಳಿಸಿಕೊಳ್ಳಲು ಏನಾದರೂ ಮಾಡಬೇಕೆಂದು 'ಈ ಅಂಗಡಿಯಿಂದ ನನ್ನ ಗಡಿಯಾರಗಳನ್ನ ಕದಲಿಸಿದರೆ ಏನಾಗತ್ತೋ ನನಗೆ ಗೊತ್ತಿಲ್ಲ, ನಿಮ್ಮ ಬಲವಂತಕ್ಕೆ ನಾನು ಆ ಕೆಲಸ ಮಾಡಬೇಕು. ಅದರ ಪರಿಣಾಮಕ್ಕೆ ನಾನು ಜವಾಬ್ದಾರನಲ್ಲ' ಕಡ್ಡಿ ಮುರಿದಂತೆ ನುಡಿದ.

ರಮೇಶನ ಮನಸ್ಸು ಕೊಂಚ ಅಳುಕಿತು. ಕಾಲ ಅವಕಾಶಗಳ ಸಿದ್ಧಾಂತ ನಿಜವಾಗಿದ್ದರೆ... ಇಲ್ಲಿರುವ